**ಓ.ಎಸ್.ನಂಃ 262/2017**

**ಡಿಡಬ್ಲ್ಯೂ-4**

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 18.06.2026 ರಂದು ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು: ವಾದಿ ಪರ ವಕೀಲರಿಂದಃ</u>**

ವಾದಿ ಮತ್ತು ಒಂದನೇ ಪ್ರತಿವಾದಿ ಸುಮಾರು 30 ವರ್ಷಗಳಿಂದ ಬೇರೆ ಬೇರೆ ವಾಸವಾಗಿದ್ದಾರೆ ಎಂದರೆ ಸರಿ. ಅದೇ ಪ್ರಕಾರ ಸ್ವತ್ತುಗಳನ್ನು ಬೇರೆ ಬೇರೆ ಹಂಚಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ವಾದಿಯ ತಾಯಿ ದಾವಾ ಸ್ವತ್ತನ್ನು ಜೀವನಾಂಶಕ್ಕೆ ಎಂದು ನಾಗಮ್ಮರವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಹಿಂದೆ ವಿಭಾಗದ ಮಾತುಕತೆಗೆ ನಾನು ಹಾಜರಿರಲಿಲ್ಲ. ನಾಗಮ್ಮ ಮರಣ ಹೊಂದಿದ ನಂತರ ವಾದಿಗೆ ಮತ್ತು ಒಂದನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ನೀಡಲಾಯಿತು ಎಂದರೆ ಸರಿಯಲ್ಲ. ನಾಗಮ್ಮ ದಾವಾ ಸ್ವತ್ತನ್ನು ಒಂದನೇ ಪ್ರತಿವಾದಿಗೆ ಬರೆದುಕೊಟ್ಟಿರುವುದು ಸುಳ್ಳು ಎಂದರೆ ಸರಿ. ನಾಗಮ್ಮರವರಿಂದ ದಾವಾ ಸ್ವತ್ತನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಮೋಸದಿಂದ ಬರೆಸಿಕೊಂಡಿದ್ದಾರೆ ಎಂದರೆ ಸರಿ. ನಾಗಮ್ಮನ ಸ್ವತ್ತಿನಲ್ಲಿ ನನಗೂ ಹಿಸ್ಸೆ ಬೇಕು ಎಂದು ಪ್ರತಿವಾದ ಪತ್ರ ಸಲ್ಲಿಸಿದ್ದೇನೆ. ವಾದಿ ಮತ್ತು ಒಂದನೇ ಪ್ರತಿವಾದಿಗೆ ಮಾತ್ರ ದಾವಾ ಸ್ವತ್ತಿನಲ್ಲಿ ಭಾಗ ಇದೇ ಹೊರತು ನನಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ